ನೋಟಿಫಿಕೇರ್ಷ್.

ಬೆಂಗಳೂರು ತಾರೀಖು 4ನೇ ಸೆಪ್ಟಂಬರ್ 1896.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಾಗುವ ತಖ್ತೇಲಿ ಕಂಡ ತಾರೀಖು ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಸ್ಟೇಟ್ ಫಾರೆಸ್ಟ್ಗಳಲ್ಲಿರುವ ವಣ ಬಿದರುಗಳನ್ನು ಕಡಿದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು ಹರಾಜ್ ಮಾಡಲ್ಪಡುತ್ತೆ. ಈ ಹರಾಜು ಡೆಪ್ಯೂಟಿ ಕಮ್ಮಿರ್ಷ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ನಂಬರ್.	ತಾಲ್ಲೂಕು ಹೆಸರು.	ಫಾರೆಸ್ಟ್ ಹೆಸರು.	ಹರಾಜ್ ತಾರೀಖು.	ಹರಾಜ್ ಸ್ಥಳ.	ಯಾವ ಆಫಿಸರ್ ಹರಾಜ್ ಮಾಡುತ್ತಾರೆ.
1	ಆನೇಕಲ್	ರಾಗಿಹಳ್ಳಿ ..	10ನೇ ನವಂಬರ್ 1896	ಬನ್ನೇರಘಟ್ಟ	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.
2	ಕಾನಖಾನಹಳ್ಳಿ ..	ಬಿಳಿಕಲ್ ..	14ನೇ ಡಿಟೋ	ಕಾನಖಾನಹಳ್ಳಿ	
3	ಡಿಟೋ .	ಬಾಣಂತಿವಾರಿ ..	ಡಿಟೋ	ಡಿಟೋ	
4	ಡಿಟೋ ..	ಮುಗ್ಗೂರು .	18ನೇ ಡಿಟೋ	ಕೋಡಿಹಳ್ಳಿ	
5	ಡಿಟೋ ..	ಚಿಲ್ಲಂದಾಡಿ ..			
6	ಮಳವಳ್ಳಿ ..	ಬಸವನಬೆಟ್ಟ ..	23ನೇ ಡಿಟೋ	ಹಲಗೂರು	
7	ಕಾನಖಾನಹಳ್ಳಿ ..	ಕಬ್ಬಾಳದುರ್ಗ ಮತ್ತು ಭೀಮನಕಂಡಿಬೆಟ್ಟ ..	27ನೇ ಡಿಟೋ	ಹನಿಯೂರು	
8	ಚನ್ನಪಟ್ಣ ..	ತೆಂಗಿನಕಲ್ ..	30ನೇ ಡಿಟೋ	ಚನ್ನಪಟ್ಣ	
9	ಕೃಷ್ಣರಾಜಪೇಟೆ ಸಬ್ ತಾ||	ಹಂದಿಗೊಂದಿ ..	2ನೇ ಡಿಸೆಂಬರ್1896	ಕೃಷ್ಣರಾಜಪೇಟೆ	
10	ಡಿಟೋ .	ಹುಲ್ಲಾರು ...			
11	ಮಾಗಡಿ ..	ಸಾವಂದುರ್ಗ ..	7ನೇ ಡಿಟೋ	ಮಾಗಡಿ	
12	ದೊಡ್ಡಬಳ್ಳಾಪುರ ..	ಹುಲಕಡಿ ಮತ್ತು ವಜ್ಜನಿ	14ನೇ ಡಿಟೋ	ಜಾಲಗೆರೆ	

2. ದೊಡ್ಡ ಫಾರೆಸ್ಟುಗಳು ಅಂದರೆ, ಬಿಳಿಕಲ್, ಬಸವನಬೆಟ್ಟ, ಮುಗ್ಗೂರು, ಚಿಲಂದಾಡಿ, ಹಂದಿಗೊಂದಿ ಮತ್ತು ಸಾವಂದುರ್ಗ ಯಿವುಗಳನ್ನು. ಸ್ವಾಭಾವಿಕವಾದ ಸರಹದ್ದುಗಳಿಂದಲಾಗಲಿ ಅಥವಾ ಬೇರೇ ಗುರ್ತುಗಳಿಂದಲಾಗಲಿ ಅನುಕೂಲವಾದ ಬ್ಲಾಕುಗಳಾಗಿ ವಿಂಗಡಿಸಲ್ಪಡುವುದು.

3. ಹರಾಜ್ ಆದ ವಡನೆ ಹರಾಜ್‌ದಾರನು ಶೇಕಡಾ 25 ರೂಪಾಯಿ ಡಿಪಾಜಿಟ್ ಕೊಡಬೇಕು. ಬಾಕಿ ಹಣ ಹರಾಜ್ ತಾರೀಖು ಆಗಾಯತು 30 ದಿವಸಗಳಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಹಕ್ಕನ್ನು ಪುನಹ ಹರಾಜುಮಾಡಿ ಮೊದಲನೇ ಹರಾಜ್‌ದಾರನನ್ನು ಲುಕ್ಸಾನಿಗೆ ಗುರಿಮಾಡುತ್ತೆ. 2ನೇ ಹರಾಜಿನಲ್ಲಿ ಜಾಸ್ತಿ ಹುಟ್ಟುಳಿ ಏನಾದರೂ ಆದರೆ ಅದಕ್ಕೆ ಅವನಿಗೆ ಹಕ್ಕುದಾರಿ ಏನೂ ಯಿರುವದಿಲ್ಲ.

4. ಫಾರೆಸ್ಟಿನಲ್ಲಿ ಅಥವಾ ಫಾರೆಸ್ಟ್ ಪ್ರದೇಶದಲ್ಲಿ ಬೆಂಕಿ ಏನಾದರೂ ಬಿದ್ದರೆ ಅದಕ್ಕೆ ಹರಾಜ್‌ದಾರನೇ ಜವಾಬ್ದಾರನಾಗಿರತಕ್ಕದ್ದು. ಅವನಿಗೆ ಗೊತ್ತುಮಾಡಿದ ಪ್ರದೇಶದಲ್ಲಿ ಕಂಟ್ರಾಕ್ಟುದಾರನೇ ಆಗಲಿ ಆಥವಾ ಅವನ ಕಡೆ ಜನರೇ ಆಗಲಿ ಏನಾದರೂ ಅಕ್ರಮನಡಿಸಿದರೆ ಫಾರೆಸ್ಟ್ ರೂಲ್ಸ್ ಮೇರೆ ನಡಿಸಲಾಧೀತು.

ಮುದ್ದಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಬೆಂಗಳೂರ್ ಡಿಸ್ಟ್ರಿಕ್ಟ್.

ತಾರೀಖು 28ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ದೊಡ್ಡಬಳ್ಳಾಪುರ ತಾಲ್ಲೂಕು ಗ್ರಾಮಾಂತರಗಳಲ್ಲಿರುವ ಕುರಂಗದ ಕಲ್ಲು ಧುರ್ಮುಖಿ ಸಂವತ್ಸರದ ಬಾಬನ್ನು 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1896ನೇ ಇಸವಿ ಜೂನ್ 25ನೇ ಮಿರ್ತು ಮಿನ 25ನೇ ನಂಬರಿ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿತ್ತಪ್ಪೆ, ಇದನ್ನ ಬದಲಾಯಿಸಿ 1896ನೇ ಇಸವಿ ಅಕ್ಟೋಬರ್ ತಾರೀಖು 1ರಲ್ಲು ದುಸರಾ ಹರಾಜು ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಛೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಮಾಡಿಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಆಗಾಯತು ಬಂದು ವರುಷದ ವಂವಿಗೆ ಇರತಕ್ಕದ್ದು.

(4.) ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ

ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟು ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೆ ವೀರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನ್‌ಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀನ್‌ಗಳಲ್ಲಿ ಕೆಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀನ್‌ಗಳನ್ನ ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಅಗದರೆ. ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪುಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ವಿ. ಎನ್. ನರಸುಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಬಾಗೇಪಲ್ಲಿ ತಾಲ್ಲೂಕು ಕಚೇರಿಯಿಂದ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಗ್ರಾಮಾಂತ್ರಗಳಲ್ಲಿ ಯಿರುವ ಕುರಂಗದಕಲ್ಲು 96—97ನೇ ದುರ್ಮುಖಿ ಸಂವತ್ಸರಕ್ಕೆ ದಾಖಲಾಗತಕ್ಕದ್ದನ್ನ 1896ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಈ ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರವರು ಮಾಡಿಸುತ್ತಾರೆ.

3. ಇಜಾರೆಯು ಪ್ರತಿ ಸಾಲ್ ಜುಲೈ ಲಾಗಾಯತು ಒಂದು ವರ್ಷದ ವರೆಗೆ ಯಿರತಕ್ಕದ್ದು.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೋ ಅಥವಾ ಯಿತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡಕೊಂಡುಬರುವ ಅಧಿಕಾರಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರನು ಹರಾಜುಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟು ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25ರೂ. ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ರೂಪಾಯಿ ಒಂದಕ್ಕೆ ಒಂದಾಣೆ ಪ್ರಕಾರ ಆಗುವ ಲೋಕಲ್ ಸೆಸ್ಸ್ ಸಹಿತ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ. ಮೊಬಲಗು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ದುಸರಾ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

6. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರನ ಅನುಮತಿ ವಿನಹ ಆರಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರರಿಗೇ ವಿನಹ ಇತರರಿಗೆ ಮಾರುವದಕ್ಕಾಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.